ಬದಲಾವಣೆ ಮಾಡಿ ೨ ಪರ್ಸೆಂಟ್ ವ್ಯಾಪಾರಸ್ಥರಿಂದ ವಸೂಲು ಮಾಡಬೇಕೆಂದು ನಿರ್ಣಯವನ್ನು ತೆಗೆದುಕೊಂಡಿತ್ತು. ಟ್ಯಾಕ್ಸೇಷನ್‌ನಲ್ಲಿ ಏನೂ ಬದಲಾವಣೆ ಆಗಿಲ್ಲ. ೨ ಪರ್ಸೆಂಟ್ ಇದೆ. ಆದರೆ ತಾವು ಹೇಳುವುದು ಮೂರು ವರ್ಷಗಳಿಂದ ಪ್ರೊಡ್ಯೂಸ್ ಹೆಚ್ಚಾಗಿದೆ ಎಂದು. ಅಂದರೆ ೧೯೭೯ ರಿಂದ ೧೯೮೨ರ ಅವಧಿಯಲ್ಲಿ ಎರಡು ಪಟ್ಟು ಹೆಚ್ಚಾಗಿದೆ. ಬೇಕಾದರೆ ರಿಸರ್ವ್‌ಬ್ಯಾಂಕ್ ಫಿಗರ್ಸ್ ಇದೆ. ಈಗ ಎಷ್ಟು ಹೆಚ್ಚಾಗಿದೆ ಎಂದರೆ ೯೦ ಪರ್ಸೆಂಟ್ ಗ್ರೋತ್ ಆಗಿದೆ. ಆದು ಬೇಕಾಗಿಲ್ಲ ಪ್ರಶ್ನೆ ಏನೆಂದರೆ ಉತ್ಪಾದನೆ ಹೆಚ್ಚಾಗಿರುವುದರಿಂದ ಬೆಲೆಗಳ ಮೇಲೆ ಸೆಸ್ ಕೂಡ ಎರಡು ಪರ್ಸೆಂಟ್ ಹೆಚ್ಚಾಗಿದೆ. ಮುಖ್ಯವಾದ ಪ್ರಶ್ನೆ ಏನೆಂದರೆ ರೆಗ್ಯುಲೇಟ್ ಮಾರ್ಕೆಟ್‌ನಿಂದ ನಿಮಗೆ ಬರತಕ್ಕಂಥ ಸೆಸ್ ಏನು ಇದೆ ಆದರಿಂದ ಸರ್ಕಾರಕ್ಕೆ ಬರತಕ್ಕಂಥ ೬-೭ ಕೋಟಿ ರೂಪಾಯಿಗಳ ಉತ್ಪಾದನೆ ಕಡಿಮೆಯಾಗುತ್ತದೆ. ಬರಬೇಕಾದ ಪ್ರೊಡ್ಯೂಸ್ ರೇಟ್ ಪ್ರೈಸ್ ರೇಟ್ ಸುಮಾರು ೭ ಕೋಟಿ ರೂಪಾಯಿಗಳು ಬರಬೇಕಾಗುತ್ತದೆ. ಆದು ಬಂದಿಲ್ಲ. ಆದಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ಎಂದು ಕೇಳಿಂತ್ತೇನೆ.

ಶ್ರೀ ಸುದೀಂದ್ರರಾವ್ ಕಸಬೆ.—೧೯೮೧ ರಿಂದ ೨ ಪರ್ಸೆಂಟ್ ಹಾಕಿದ ಮೇಲೆ ವ್ಯಾಪಾರಸ್ಥರಿಂದ ಹಣ ಬಂದಿಲ್ಲ.

ಶ್ರೀ ಭೀಮಣ್ಣಕಂಡ್ರೆ.—ಅಧ್ಯಕ್ಷರೇ ಒಂದು ಪರ್ಸೆಂಟ್ ಮಾರ್ಕೆಟ್ ಸೆಸ್ ಇದ್ದಾಗ ನಮ್ಮ ಭಾಲ್ಕಿಯಲ್ಲಿ ಐದು ಲಕ್ಷ ರೂಪಾಯಿಗಳ ಇನ್‌ಕಮ್ ಇತ್ತು. ಎರಡು ಪರ್ಸೆಂಟ್ ಮಾಡಿದ್ದರಿಂದ ಮೂರು ಲಕ್ಷಕ್ಕೆ ಇಳಿಯಿತು. ಇದಕ್ಕೆ ಕಾರಣವೇನೆಂದರೆ ಬೇರೆ ಸ್ಟೇಟ್‌ಗಳಿಗೆ ಮಾರಾಟಗಾರರು ಹೋಗುತ್ತಿದ್ದಾರೆ. ಈ ಕಾರಣಕ್ಕಾಗಿ ಮಾನ್ಯ ಮುಖ್ಯ ಮಂತ್ರಿಗಳಿಗೆ ೧೬ನೇ ಮೇ ೧೯೮೨ ರಲ್ಲಿ ಭಾಲ್ಕಿಯಲ್ಲಿ ಕಿಸಾನ್ ರ‍್ಯಾಲಿ ಆದಾಗ ಅನ್ಯಾಯವಾಗಿರುತ್ತದೆಂದು ಮನವರಿಕೆ ಮಾಡಿಕೊಂಡೆ. ಅದಕ್ಕೆ ಮಾನ್ಯ ಮುಖ್ಯ ಮಂತ್ರಿಗಳು ಒಂದು ರೂಪಾಯಿ ಮಾಡುವುದಾಗಿ ಆಶ್ವಾಸನೆಯನ್ನು ಕೊಟ್ಟರು. ಇದೇ ಸೆಷನ್‌ನಲ್ಲಿ ಅಮೆಂಡ್‌ಮೆಂಟ್ ತಂದು ೨ ಪರ್ಸೆಂಟ್ ಇರುವುದನ್ನು ಒಂದು ಪರ್ಸೆಂಟ್ ಮಾಡಬೇಕೆಂದು ಮಾನ್ಯ ಮುಖ್ಯ ಮಂತ್ರಿಗಳಿಂದ ಮಿನಿಟ್ ಕೂಡ ಬಂದಿದೆ.

ಶ್ರೀ ಸುಧೀಂದ್ರರಾವ್ ಕಸಬೆ.—ಅಧ್ಯಕ್ಷರೆ ಸಾಕಷ್ಟು ಮನವಿಗಳು ಕೆಳಮನೆಯಲ್ಲೂ ಮತ್ತು ಮೇಲೆ ಮನೆಯಲ್ಲೂ ಬಂದಿರುತ್ತದೆ. ಆದರ ಬಗ್ಗೆ ಸರ್ಕಾರದವರು ಪರಿಶೀಲನೆ ಮಾಡುತ್ತಿದ್ದಾರೆ.

ಅಧ್ಯಕ್ಷರು.—ಪ್ರಶ್ನೋತರ ವೇಳೆ ಮುಗಿಯಿತು.

ಮನವಿಗಳು

ಶ್ರೀ ಜಿ. ರಾಜೂಗೌಡ.—ಮಾನ್ಯ ಅಧ್ಯಕ್ಷರೇ ಇಂಡಸ್ಟ್ರೀಸ್ ಟ್ರೈನಿಂಗ್ ಇನ್‌ಸ್ಟಿಟ್ಯೂಷನ್ ಬಗ್ಗೆ ಗಮನಸೆಳೆಯುವ ಸೂಚನೆಯನ್ನು ಕಳುಹಿಸಿಕೊಟ್ಟಿದ್ದೇನೆ.

ಅಧ್ಯಕ್ಷರು.—ಯಾವತ್ತು ತಾವು ಕಳುಹಿಸಿಕೊಟ್ಟದ್ದು.

ಶ್ರೀ ಜಿ. ರಾಜುಗೌಡ.—ನಾಲ್ಕು ದಿವಸಗಳಾಯಿತು.

ಅಧ್ಯಕ್ಷರು.—ನಾಳೆ ಅದನ್ನು ನೋಡುತ್ತೇನೆ.

ಶ್ರೀ ಜಿ.ಕೆ. ತೆಕ್ಕೇಡ್.—ಅಧ್ಯಕ್ಷರೆ ಒಂದು ವಾರದಿಂದ ಒಕ್ಕಲುತನ ಖಾತೆಯ ಮತ್ತು ತೋಟಗಾರಿಕೆಯ ಪದವೀಧರರು ಉಪವಾಸ ಸತ್ಯಾಗ್ರಹವನ್ನು ಕಬ್ಬನ್‌ಪಾರ್ಕ್‌ನಲ್ಲಿ ಪ್ರಾರಂಭ ಮಾಡಿದ್ದಾರೆ. ಮಾಸಿಕ ಸರಿಯಾದ ವೇತನ ಸಿಗಬೇಕೆಂದು ಈವತ್ತಿನಿಂದ ಆಮರಣ ಉಪವಾಸ ಪ್ರಾರಂಭಮಾಡಿದ್ದಾರೆ. ಈ ಬಗ್ಗೆ ಸಂಬಂಧಪಟ್ಟ ಖಾತೆಯವರು ಸೂಕ್ತ ಕ್ರಮ ತೆಗೆದುಕೊಂಡು ಆ ಪದವೀಧರರಿಗೆ ಸರಿಯಾದ ವೇತನ ದೊರಕುವಂತೆ ಮಾಡಬೇಕೆಂದು ಕೇಳುತ್ತೇನೆ.

ಅಧ್ಯಕ್ಷರು.—ತಾವು ನೋಟೀಸ್ ಕೊಟ್ಟಿದ್ದೀರಾ?

ಶ್ರೀ ಜಿ.ಕೆ. ತೆಕ್ಕೇಡ್.—ನೋಟೀಸ್ ಕೊಟ್ಟಿಲ್ಲ. ಅವರು ಆಮರಣ ಉಪವಾಸ ಮಾಡಲು ಆರಂಭಿಸಿದ್ದಾರೆ.

ಅಧ್ಯಕ್ಷರು.—ನೋಟೀಸ್ ಕೊಡದೆ ಉತ್ತರ ಕೊಡುತ್ತಾರೆಯೇ? ಸುಮ್ಮನೆ ಸರ್ಕಾರವನ್ನು ಕೆಣಕಿ ಎಂದಂ ಹೇಳುವುದಕ್ಕೆ ಆಗುತ್ತದೆಯೇ?

ಶ್ರೀ ಜಿ.ಕೆ. ತೆಕ್ಕೇಡ್.—ತಮ್ಮ ಮುಖಾಂತರ ಮಾನ್ಯ ಸಚಿವರ ಮತ್ತು ಸರ್ಕಾರದ ಗಮನವನ್ನು ಸೆಳೆಯಬಯಸುತ್ತೇನೆ.

ಶ್ರೀ ಪರಪ್ಪ ಕಳ್ಳಿಗುಡ್ಡ.—ಇದು ಒಂದು ಬಹಳ ಗಂಭೀರವಾದ ವಿಚಾರವಾಗಿರುತ್ತದೆ. ಅವರು ಆಮರಣ ಉಪವಾಸ ಕುಳಿತಿದ್ದಾರೆ.

ಅಧ್ಯಕ್ಷರು.—ಈವತ್ತು ನಾಳೆ ಅಗ್ರಿಕಲ್ಚರ್ ಡಿಮ್ಯಾಂಡ್ ಬರುತ್ತದೆ. ಆಗ ವಿಚಾರವನ್ನು ಪ್ರಸ್ತಾಪ ಮಾಡಿ.

ಶ್ರೀ ಪಿ. ರಾಮದೇವ್.—ಕಳೆದ ತಿಂಗಳು ಈ ಮನೆಯಲ್ಲಿ ಜಸ್ಟೀಸ್ [illegible]ರವರು ಕೊಟ್ಟಿರ ತಕ್ಕಂಥ ವರದಿ ಬಗ್ಗೆ ಪ್ರಸ್ತಾಪಿಸಿದ್ದೆ. ನಗರದಲ್ಲಿ ನಡೆದಂಥ ಸರ್ಕಸ್ ದುರಂತದ ಬಗ್ಗೆ ಆದಷ್ಟು ಜಾಗ್ರತೆಯಾಗಿ ಈ ಮನೆಯಲ್ಲಿ ವರದಿ ಇಡಿ ಎಂದು ಕೇಳಿದ್ದಕ್ಕೆ. ಅದಕ್ಕೆ ಆದಷ್ಟು ಜಾಗ್ರತೆಯಾಗಿ ಈ ಮನೆಯಲ್ಲಿ ಇಡುತ್ತೇವೆಂದು ಒಂದು ಭರವಸೆಯನ್ನೂ ಕೂಡ ಕೊಟ್ಟಿದ್ದರು. ಆದರೂ ರಿಪೋರ್ಟ್‌ನ್ನು ಇಟ್ಟಿಲ್ಲ. ಡಿಲೇ ಮಾಡುತ್ತಿದ್ದಾರೆ. ಜಸ್ಟೀಟ್ ಕುದೂರ್‌ರವರು ತಮ್ಮ ರಿಪೋರ್ಟ್‌ನ್ನು ಕೊಟ್ಟು ಈಗಾಗಲೇ ಎರಡು ತಿಂಗಳಾಗಿರುತ್ತದೆ. ಇದು ಇಡೀ ಪ್ರಪಂಚದ ಗಮನವನ್ನೇ ಸೆಳೆದಿರತಕ್ಕಂಥ ದುರಂತವಾಗಿರುತ್ತದೆ.

ಶ್ರೀ ವೈ. ರಾಮಕೃಷ್ಣ.—ಅದನ್ನು ವಿಚಾರಿಸಿ ಹೇಳುತ್ತೇನೆ.

ಶ್ರೀ ಸಿ.ಎ. ಚಂದ್ರೇಗೌಡ.—ಮಾನ್ಯ ಅಧ್ಯಕ್ಷರೇ, ಪ್ರತಿದಿವಸ ಆಕಾಶವಾಣಿಯಲ್ಲಿ ಕರ್ನಾಟಕ ರಾಜ್ಯ ಲಾಟರಿ, ಕರ್ನಾಟಕ ರಾಜ್ಯ ಲಾಟರಿ, ಕರ್ನಾಟಕ ರಾಜ್ಯ ಲಾಟರಿ ಎಂದು ಒಂದು ಪ್ರಕಟಣೆ ಬರುತ್ತದೆ. ಇದು ಬಹಳ ಗಂಭೀರವಾದ ವಿಚಾರ. ಇದರಲ್ಲಿ ಏನಾದರೂ ಅರ್ಥ ಇದೆಯೇ? ಕರ್ನಾಟಕ ರಾಜ್ಯ ಲಾಟರಿ ಟಿಕೆಟ್‌ನ್ನು ಕೊಂಡುಕೊಳ್ಳಿ ಎಂದು ಹೇಳಿದರೆ ಅದನ್ನು ನಾನು ಒಪ್ಪಿಕೊಳ್ಳುತ್ತಿದ್ದೆ. ಬೆಂಗಳೂರು ಆಕಾಶವಾಣಿ ಮತ್ತು ವಿವಿಧ ಭಾರತಿಯಲ್ಲಿ ಈ ರೀತಿ ಬರುತ್ತಿದೆ. ದಯವಿಟ್ಟು ಡೈರೆಕ್ಟರವರಿಗೆ ನಿರ್ದೇಶನವನ್ನು ಕೊಟ್ಟು ಸರಿಯಾದ ರೀತಿಯಲ್ಲಿ ಪ್ರಕಟಣೆ ಮಾಡುವಂತೆ ಹೇಳಿ. ಇಲ್ಲದಿದ್ದರೆ ಸಾರ್ವಜನಿಕರಲ್ಲಿ ಒಂದು ರೀತಿಯಾದ ತಪ್ಪು ಅಭಿಪ್ರಾಯ ಬರುವುದಕ್ಕೆ ಸಾಧ್ಯವಾಗುತ್ತದೆಂದು ಹೇಳುತ್ತೇನೆ.

ಶ್ರೀ ವಿ.ಎಂ. ಗಾಡಿ.—ಮಾನ್ಯ ಅಧ್ಯಕ್ಷರೇ ಅಂಬಿಕಾನಗರದಲ್ಲಿ ಕಾರ್ಮಿಕರನ್ನು ತೆಗೆದುಕೊಂಡು ಹೋಗುತ್ತಿದ್ದ ಒಂದು ಆಮ್ನಿ ಬಸ್ ಆಕ್ಸಿಡೆಂಟ್ ಆಗಿ ಸುಮಾರು ಆರು ಜನರು ಸತ್ತು ೫೦ ಜನಗಳಿಗೆ ಗಾಯಗಳಾಗಿರುತ್ತದೆ. ಇದನ್ನು ಬರೆದು ಕಳುಹಿಸಿಕೊಟ್ಟು ಸುಮಾರು ಒಂದು ತಿಂಗಳಾಯಿತು. ಆ ಬಗ್ಗೆ ಇದುವರೆಗೆ ಏನೂ ಕ್ರಮ ತೆಗೆದುಕೊಂಡಿಲ್ಲ.

ಅಧ್ಯಕ್ಷರು.—ಉತ್ತರ ಬಂದಿದೆ ನಾನು ಅದನ್ನು ನೋಡುತ್ತೇನೆ.

QUESTIONS FOR ANSWERS ON THE DAY

(but not taken up)

Deputation of Officers under Colombo Plan.

92. SRI S.S. ARAKERI (Ballolli).—Will the Chief Minister be pleased to state:—

(a) total number of officers visited foreign countries last 3 years ; (the names and other details may be furnished).

(b) total expenditure incurred for their tours abroad